ಶ್ರೀಮತಿ ಶಕುಂತಲಾ ಶೆಟ್ಟಿ (ಪುತ್ತೂರು) : ಮಾನ್ಯ ಛೇರ್ಮನ್‌ರವರೆ, ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದಕ್ಕಾಗಿ ತಮಗೆ ವಂದಿಸುತ್ತೇನೆ.

ಶ್ರೀ ಛೇರ್ಮನ್: ಆರೋಗ್ಯ ಸಚಿವರು ಒಂದು ಸ್ಪಷ್ಟೀಕರಣ ನೀಡಲು ಬಯಸುತ್ತಾರೆ.

9. ಮಂತ್ರಿಗಳ ಹೇಳಿಕೆ.

ವಿಷಯ: ಕರ್ನಾಟಕದಲ್ಲಿ ಕೋಳಿ ಜ್ವರದಿಂದ ತೊಂದರೆಯಾಗಿರುವ ಬಗ್ಗೆ.

ಶ್ರೀ ಆರ್.ಅಶೋಕ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಛೇರ್ಮನ್‌ರವರೆ, ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಕುಮಾರ ಬಂಗಾರಪ್ಪನವರು ಕೋಳಿ ಜ್ವರದ ಬಗ್ಗೆ ಪ್ರಸ್ತಾವ ಮಾಡಿದರು. ಕೋಳಿ ಜ್ವರ ಕರ್ನಾಟಕದಲ್ಲಿದೆ ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿಲ್ಲ ಎಂದು ಹೇಳಿದರು. ಅದು ಪತ್ರಿಕೆಗಳಿಗೆ ನಾಳೇ ಹೋಗುವುದರಿಂದ ನಾನು ಸ್ಪಷ್ಟೀಕರಣ ನೀಡಬೇಕಾಗಿದೆ. ಬೇರೆ 5 ರಿಂದ 10 ಲಕ್ಷ ಜನರು ಇದನ್ನು ನಂಬಿಕೊಂಡಿದ್ದಾರೆ. ಅವರು ಬಹಳ ಸಂಕಷ್ಟದಲ್ಲಿದ್ದಾರೆ. ಕೋಳಿ ಮಾಂಸ 5 ರೂಪಾಯಿಗೆ ಒಂದು ಕೆಜಿ ಗೆ ಸೇಲ್ ಮಾಡಬೇಕು. ಅವರೆಲ್ಲರೂ ಆಂಧ್ರಪ್ರದೇಶದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅದು ಅಗಬಾರದು ಎಂಬ ದೃಷ್ಟಿಯಿಂದ ನಾನು ಕ್ಲಾರಿಫೈ ಮಾಡುತ್ತಿದ್ದೇನೆ.

ಶ್ರೀ ಆರ್.ವಿ.ದೇಶಪಾಂಡೆ : ಸರ್ಕಾರದವರು ಬಡ್ಡಿ ಎಲ್ಲವನ್ನು ಕಡಿಮೆ ಮಾಡಿದ್ದಾರೆ.

ಶ್ರೀ ಆರ್.ಅಶೋಕ್: ಮಾಧ್ಯಮದ ಮುಖಾಂತರ ತಪ್ಪು ಸಂದೇಶ ಈ ಸದನದಿಂದ ಹೋಗಬಾರದು. ಕರ್ನಾಟಕದಲ್ಲಿ ಆ ರೀತಿಯ ಕೋಳಿ ಜ್ವರ ಯಾವುದು ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಾದ ಗೌರವಾನ್ವಿತ ಧರ್ಮಸಿಂಗ್‌ರವರು ಬೆಳಿಗ್ಗೆ ಪ್ರಸ್ತಾವ ಮಾಡಿದ್ದಾರೆ. ಜೇವರ್ಗಿಯಲ್ಲಿ ಈ ರೀತಿಯ ಕೋಳಿ ಜ್ವರದ ಕಾಯಿಲೆಯಿಂದ ಸತ್ತಿದ್ದಾರೆಂದು ಹೇಳಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕೋಳಿ ಜ್ವರ ಇಲ್ಲವೆಂಬುದರ ಬಗ್ಗೆ ಪ್ರೂಫ್ ಮಾಡಬೇಕಾದರೆ ಪಬ್ಲಿಕ್‌ನಲ್ಲಿ ಹೆಲ್ತ್ ಮಿನಿಸ್ಟರ್ ತಿಂದು ತೋರಿಸಬೇಕು. ನೀವು ಕೋಳಿಯನ್ನು ತಿನ್ನುತ್ತಿರುವ ಫೋಟೋ ಬರಬೇಕು.

ಶ್ರೀ ಆರ್.ಅಶೋಕ್: ನಾನು ದಿನಾಗಲೂ ಕೋಳಿ ಮಾಂಸವನ್ನೆ ತಿನ್ನುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೋ ನೋ, ಅದನ್ನು ಪತ್ರಿಕೆಯಲ್ಲಿ ತೋರಿಸಬೇಕು ಅದು ಪತ್ರಿಕೆಯಲ್ಲಿ ಬಂದರೆ ಒಳ್ಳೆಯದಾಗುತ್ತದೆ.

ಶ್ರೀ ಆರ್.ಅಶೋಕ್: ಬೇರೆ ಎಲ್ಲಾ ಕಾರ್ಯಕ್ರಮಗಳನ್ನು ಕೂಡ ಮಾಡಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬೇರೆ ರಾಜ್ಯದಲ್ಲಿ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ನೀವು ನೋಡಿ.

ಶ್ರೀ ಆರ್.ಅಶೋಕ್: ನಾವು ಆ ರೀತಿಯಾದ ಕಾರ್ಯಕ್ರಮಗಳನ್ನು ಮಾಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದು ನಿಮ್ಮಿಂದಲೇ ಪ್ರಾರಂಭವಾಗಲಿ. ನಿಮಗೆ ಪಬ್ಲಿಸಿಟಿ ಚೆನ್ನಾಗಿ ಬರುತ್ತದೆ.

ಶ್ರೀ ಎನ್.ಧರ್ಮಸಿಂಗ್(ವಿರೋಧಪಕ್ಷದ ನಾಯಕರು): ಇವತ್ತು ಪೂರಕ ಅಂದಾಜಿನಲ್ಲಿ ಮಾತನಾಡತಕ್ಕಂತಹ ಕಾಲದಲ್ಲಿ ಪ್ರಸ್ತಾಪ ಮಾಡಿದ್ದೇನೆ. ನಿನ್ನೆ ಜೇವರ್ಗಿ ತಾಲ್ಲೂಕಿನಲ್ಲಿ ರೇವನೂರು ಎಂಬ ವಿಲೇಜ್ ಇದೆ. ಜೇವರ್ಗಿಯಿಂದ ಒಂದು 6 ಕಿಲೋಮೀಟರ್ ದೂರದಲ್ಲಿ ತಾಂಡದಲ್ಲಿರತಕ್ಕಂತಹ ತಾಯಿ ಮತ್ತು ಮಕ್ಕಳಿಬ್ಬರು, ಕೋಳಿಜ್ವರದಲ್ಲಿ ಸತ್ತಿದ್ದಾರೆಂಬ ಎಂಬ ವರ್ತಮಾನ ಬಂತು. ಸರ್ಕಲ್ ಇನ್ಸ್‌ಪೆಕ್ಟರ್ ಕೂಡ ನನ್ನ ಜೊತೆಯಲ್ಲಿ ಮಾತನಾಡಿದ್ದಾರೆ. ಇವತ್ತು ಗುಲ್ಬರ್ಗಾದಲ್ಲಿ ಬೀದರ್‌ನಲ್ಲಿ ರಾಯಚೂರಿನಲ್ಲಿ, ಬೇರೆ ಕಡೆಗಳಲ್ಲಿ ಕೋಳಿ ಜ್ವರದ ನಮಗೆ ಲಕ್ಷಣಗಳು ಕಂಡುಬರುತ್ತಿದೆ. ನಾವು ಏನು ಹೇಳಿದ್ದೇವೆಂದರೆ ಇವತ್ತು ರಾಜ್ಯದ ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಮಂತ್ರಿಗಳು ಅಂದಾಜು ಮಾಡುವಂತಹ ಕಾಲದಲ್ಲಿ ವಿಶೇಷವಾದಂತಹ ಹಣವನ್ನು ಇದಕ್ಕೆ ಕೂಡಬೇಕಾಗುತ್ತದೆ. ಇವತ್ತು ಯಾವ್ಯಾವ ಇಲಾಖೆಗಳಿಗೆ ಈ ರೀತಿಯಾಗಿ ಹೆಚ್ಚಿನ ಹಣವನ್ನು ಕೊಡತಕ್ಕಂತಹ ರೀತಿಯಲ್ಲಿ ಹೊಸ ಸ್ಕೀಮ್‌ಗೆ ಈ ಬಗ್ಗೆ ಕೂಡ ಹೆಚ್ಚಿನ ಹಣವನ್ನು ಕೊಡತಕ್ಕಂತಹ ಪ್ರಯತ್ನ ಮಾಡಬೇಕೆಂದು ಹೇಳಿದ್ದೇನೆ. ತಮಗೂ ಕೂಡ ನಾನು ಸಲಹೆ ಕೊಟ್ಟಿದ್ದೇನೆ ತಾವು ಯುವಕರಿದ್ದೀರಿ. ಇಲ್ಲಿಯೇ ಬೆಂಗಳೂರು ಸುತ್ತ ಹೋಗಬಾರದು ಆ ಭಾಗದಲ್ಲಿಯೂ ಕೂಡ ತಾವು ಹೋಗಿ ಬಂದು ನೋಡಿ ಮತ್ತು ನಮ್ಮ ಆರೋಗ್ಯ ಇಲಾಖೆಯ ತಜ್ಞರನ್ನು ಕಳುಹಿಸಿಕೊಡ ಬೇಕೆನ್ನುವಂತಹ ಮಾತನ್ನು ಹೇಳಿದ್ದೇನೆ. ಇವತ್ತು ಮಹಾರಾಷ್ಟ್ರದಲ್ಲಿ ಏನಾಗಿದೆ, ಔರಾಂಗಬಾದ್‌ನಲ್ಲಿ ಏನಾಗಿದೆ, ಬೇರೆ ಕಡೆಗಳಲ್ಲಿ ಏನಾಗಿದೆ? ದೊಡ್ಡ ಅನಾಹುತ ಆಗತಕ್ಕಂತಹ ರೀತಿಯಲ್ಲಿ ಬಂದಾಗ ಮಾತ್ರ ಕ್ರಮ ತೆಗೆದುಕೊಳ್ಳುವುದಲ್ಲ. You have to take immediate action in Bidar ಹೇಳಿದ್ದೇನೆ. ನೀವು ಏನಾದರೂ ಕ್ರಮವನ್ನು ತೆಗೆದುಕೊಂಡರೆ ಅದು ಸಾಕು. ಆ ಮಾತನ್ನು ನಾನು ಪ್ರಸ್ತಾಪ ಮಾಡಿದ್ದೇನೆ.

ಡಾ.ವಿ.ಎಸ್.ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು): ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಕಳೆದ ತಿಂಗಳು 17ನೇ ತಾರೀಖಿನಿಂದ ನಂದೂರ್‌ಬಾರ್ ಮಹಾರಾಷ್ಟ್ರವಲ್ಲಿ ಆಮೇಲೆ 20 ದಿವಸಗಳ ನಂತರ ಜಲಗಾವ್‌ನಲ್ಲಿ, ಬಂದಿರತಕ್ಕಂತಹ ಕೋಳಿಜ್ವರ ಬಿಟ್ಟರೆ ನಮ್ಮ ಕರ್ನಾಟಕ ಸಂಪೂರ್ಣ ಈ ಈ ಬರ್ಡ್ ಫ್ಲೂನಿಂದ ಮುಕ್ತವಾಗಿದೆ. ಎಲ್ಲಿಯೂ ಒಂದು ಕಡೆ ಕೋಳಿ ಜ್ವರದ ಪ್ರಕರಣ ಬಂದಿರುವುದಿಲ್ಲ. ನಾವು ಬಹಳ ನಿಯತ್ತಿನಿಂದ ಬ್ಲಡ್ ಸ್ಯಾಂಪಲ್ಸ್, ಭೂಪಾಲ್‌ಗೆ ಕಳುಹಿಸಿದ್ದೇವೆ. ಅಲ್ಲಿಂದ ನೆಗೆಟೀವ್ ರಿಸಲ್ಟ್ ಬರುತ್ತಿದೆ. ಇಡೀ ಕರ್ನಾಟಕ ವೈರಸ್ ಬರ್ಡ್ ಫ್ಲುನಿಂದ ಮುಕ್ತವಾಗಿದೆ ಇದು ಒಂದು ವಿಚಾರವಾಗಿದೆ. ಇವತ್ತು ಕೋಳಿಜ್ವರ ಕರ್ನಾಟಕದಲ್ಲಿ ಇಲ್ಲ. ಆದರೆ ಕೋಳಿಯ ಮಾರುಕಟ್ಟೆಗೆ ಜ್ವರ ಬಂದಿದೆ. ಕೋಳಿಯ ಮಾರುಕಟ್ಟೆಗೆ ಇವತ್ತು ಕಾಯಿಲೆ ಬಂದು ಮಾರಾಟ ಕುಸಿತವಾಗಿ ನಮ್ಮ our plyers in poultry field are all in distress. ಹಾಗಾಗಿ ತಪ್ಪು ಸಂದೇಶ ಹೋಗುವುದು ಬೇಡ. ಮತ್ತು ಕೋಳಿಯನ್ನು ಕೋಳಿ ಜ್ವರವಿದ್ದ ಕೋಳಿಯನ್ನು ಸಹ ತಿಂದರೆ ಅದು ಮನುಷ್ಯರಿಗೆ ಬರುವುದಿಲ್ಲ. ಕೋಳಿಮೊಟ್ಟೆ ಹಾಗೂ ಮಾಂಸದಿಂದ ಇದು ಬರುವುದಿಲ್ಲ.

ಶ್ರೀ ಎನ್.ಧರ್ಮಸಿಂಗ್ : ಇದು ಬಂದಿದೆಯೋ ಇಲ್ಲವೋ ಎಂಬುದನ್ನು ಹೇಳಲಿ.

ಡಾ.ವಿ.ಎಸ್.ಆಚಾರ್ಯ : I hare not concluded.

ಶ್ರೀ ಎನ್.ಧರ್ಮಸಿಂಗ್ : ಇಕ್ಬಾಲ್ ಅನಸ್ಸಾರಿಯವರು ಅವತ್ತು ಜ್ವರ ಇದೆ ಎಂದರು. ನಮಗೆ ನೀವು ಹೇಳಿದರೆ ಹೇಗೆ ನಂಬುವುದು?

ಡಾ.ವಿ.ಎಸ್.ಆಚಾರ್ಯ : 1929 ರಿಂದ ಪ್ರಥಮ ಬಾರಿ ಕೋಳಿ ಜ್ವರವಿತ್ತು. Highly pathegenic Influenza. (HPA) ಹೆಚ್‌ಪಿಎ ಅಂತ ಈ ಕಾಯಿಲೆ ಜಗತ್ತಿನಲ್ಲಿ ಕಾಣಿಸಿಕೊಂಡ ನಂತರ ಇಡೀ ಜಗತ್ತಿನಲ್ಲಿ ಕಾಣಿಸಿ ಕೊಂಡ ನಂತರ ಇಡಿಜಗತ್ತಿನಲ್ಲಿ ಅದು ಬಂದಿರುವಂತಹದ್ದು, 280 ಜನರಿಗೆ ಮಾತ್ರ. ಆ ಪೈಕಿ 91 ಜನ ಇದುವರೆಗೆ ದಾಖಲೆಯಲ್ಲಿ ಇಡೀ ಜಗತ್ತಿನಲ್ಲಿ ಸತ್ತಿದ್ದಾರೆ. ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ ಈ ಹೆಚ್.ಪಿ.ಎ.ಬಗ್ಗೆ ಒಂದು ಭಯ ಏನಿದೆ, ಆ ಭಯದಿಂದ ತೊಂದರೆಯಾಗಿರುವುದು. ಆದರೆ ಭಾರತದಲ್ಲಿ ಒಬ್ಬನೇ ಒಬ್ಬ ಕೋಳಿಜ್ವರದಿಂದ 1929ರಿಂದ ಇದುವರೆವಿಗೂ ಇಲ್ಲಿಯವರೆವಿಗೂ ಸಾಯಲಿಲ್ಲ. ಹಾಗಾಗಿ ಈ ಸದನದ ಮುಖಾಂತರ ಒಂದು ಮೆಸೆಜ್ ಆ ಖಾತೆಯ ಒಬ್ಬ ಮಂತ್ರಿಯಾಗಿ ಕೊಡಲು ಬಯಸುತ್ತೇನೆ. ಕೋಳಿಯನ್ನು ತಿಂದರೆ ಆ ಜ್ವರ ಬರುವುದಿಲ್ಲ. ಕೋಳಿಯ ಪೌಲ್ಟಿಯಲ್ಲಿರುವಂತಹ ದುರ್ಬಲರು ಮತ್ತು ಆಶಕ್ತರಿಗೆ ಮಕ್ಕಳಿಗೆ ಕೋಳಿಯ secretion ಇಂತಹದ್ದರಿಂದ, ಗಾಯವಿದ್ದವರಿಗೆ, ಬಂದು ತಾಗಿದರೆ ಬರಬಹುದೇ ವಿನ: ಕೋಳಿಯ ಮಾಂಸವನ್ನು ತಿನ್ನುವುದರಿಂದ ಈ ಕಾಯಿಲೆ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನೀವು ಹೇಳುವುದು ಸರಿ ಇದೆ. ಸಂಶಯವನ್ನು ನಿವಾರಣೆ ಮಾಡಬೇಕಾದರೆ..

ಡಾ.ವಿ.ಎಸ್.ಆಚಾರ್ಯ : ಮಾನ್ಯ ಪ್ರತಿಪಕ್ಷದ ನಾಯಕರು ಹೇಳಿರುವಂತಹ ಘಟನೆ Please, I am concluding

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅಟ್‌ಲಿಸ್ಟ್ ನೀವು ಕೋಳಿ ಬೇಡ, ಸಸ್ಯಹಾರವನ್ನು ತಿಂದು ತೋರಿಸಲಿ. ಸಚಿವರು ಕೋಳಿಯನ್ನು ತಿಂದು ತೋರಿಸಲಿ. ಜನರಿಗೆ ಸಂಶಯ ನಿವಾರಣೆಯಾಗುತ್ತದೆ. ನೋಡಿ ಆಚಾರ್ಯ ಅಂತಹವರು ತಿನ್ನುತ್ತಿದ್ದಾರೆ. ಇದರಲ್ಲಿ ಯಾವ ರೋಗವು ಕೂಡ ಇಲ್ಲವೆಂದು ಹೇಳಿ ಗೊತ್ತಾಗುತ್ತದೆ. ಬೇರೆ ಕಡೆಗಳಲ್ಲಿ ಎಕ್ಸಿಬಿಟ್ ಮಾಡಿದ್ದಾರೆ. ದೆಹಲಿಯಲ್ಲಿ ಮಾಡಿದ್ದಾರೆ. ನೀವು ಎಲ್ಲಿ ಮಾಡುತ್ತೀರಾ?

ಶ್ರೀ ಸಿ.ಟಿ.ರವಿ: ನಾವು ತಿಂದಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಿಮಗೆ ಮಾತನಾಡುವಂತಹ ಹಕ್ಕೇ ಇಲ್ಲ. ತಿನ್ನುವುದು ಇಲ್ಲ, ಮಾಡುವುದು ಇಲ್ಲ. ನಿಮ್ಮನ್ನು ಯಾರು ನಂಬುತ್ತಾರೆ?

ಛೇರ್ಮನ್: Let him complete.

ನೀವು ಎರಡು ಜನ ಮಂತ್ರಿಗಳು ಹೇಳಿದ್ದೀರಿ.

ಶ್ರೀ ಎಸ್.ರಾಜೇಂದ್ರನ್: ಮಾನ್ಯ ಛೇರ್ಮನ್‌ರವರೆ .....

ಛೇರ್ಮನ್: ಮಾನ್ಯ ರಾಜೇಂದ್ರನ್‌ರವರೆ ಅವರು ಮುಗಿಸಲಿ ನಂತರ ಮಾತನಾಡಿ.

(ಗೊಂದಲ)

ಶ್ರೀ ಎಸ್.ರಾಜೇಂದ್ರನ್: ಕೋಳಿ ತಿನ್ನಬೇಕೆಂದು ಹೇಳಿದಿರಿ, ನಿಜ, ಆದರೆ ಗಂಡು ಕೋಳಿನಾ ಅಥವಾ ಹೆಣ್ಣು ಕೋಳಿನಾ, ಯಾವ ಕೋಳಿಯನ್ನು ತಿನ್ನಬೇಕೆಂದು ಹೇಳಬೇಕು.

ಡಾ: ವಿ.ಎಸ್.ಆಚಾರ್ಯ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು): ಸರ್, ಇದು ಬಹಳ ಸೀರಿಯಸ್ಸಾದ ವಿಷಯ. ಕರ್ನಾಟಕ ಪೌಲ್ಟಿಯಲ್ಲಿ ಬಹಳ ಉತ್ತಮ ಸ್ಥಾನದಲ್ಲಿದ್ದಂತಹ ವಿಷಯ. ಇವತ್ತು ಈ ಭೀತಿಯಿಂದಾಗಿ ಮಾರುಕಟ್ಟೆ ಇವತ್ತು ಬಹಳ ಕಷ್ಟಕ್ಕೊಳಗಾಗಿದೆ, ಕೋಳಿಜ್ವರವಲ್ಲ, ಮಾನ್ಯ ಪ್ರತಿಪಕ್ಷದ ನಾಯಕರು ಹೇಳಿದ ಕಡೆಯಲ್ಲಿ ಏನಾದರೂ ಅನಾಹುತವಾಗಿದ್ದರೆ ಅದು ಕೋಳಿ ಜ್ವರವಲ್ಲ, ಅದು ಘಡ್ ಪಾಯಿಸನ್ ಎಂದು ... ವೆನ್ನುತ್ತಾರೆ.

ಶ್ರೀ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ): ಅಧ್ಯಕ್ಷರೇ, ಒಂದು ನಿಮಿಷ, ಇದರ ಬಗ್ಗೆ ಕ್ಲಾರಿಫಿಕೇಶನ್ ಆಗಬೇಕು. ಘಡ್ ಪಾಯಿಸನ್‌ನಿಂದ ಆ ಅನಾಹುತವಾಗಿಲ್ಲ, ಗುಲ್ಬರ್ಗಾ, ಬೀದರ್ ಜಿಲ್ಲೆಗಳ ಕಡೆ ಚಿಕನ್ ಗುನ್ಯಾ ಇನ್‌ಫೆಕ್ಷನ್ ಎಂಬ ರೋಗ ಹರಡುತ್ತಿದೆ, ಅದರ ಹೆಸರು ಚಿಕನ್ ಗುನ್ಯಾ, ಚಿಕನ್ ಗುನ್ಯಾ ಈಸ್ ಎ ವೈರಲ್ ಇನ್‌ಫೆಕ್ಷನ್, ಇದು ಕೋಳಿಯಿಂದ ಬರತಕ್ಕದ್ದಲ್ಲ. ಇದನ್ನು ಅರ್ಥ ಮಾಡಿಕೊಳ್ಳಿ. ಗುಲಬರ್ಗಾ, ಬೀದರ್, ರಾಯಚೂರು ಜಿಲ್ಲೆಯಲ್ಲಿ ಸಾಕಷ್ಟು ಜನ ಈ ರೋಗಕ್ಕೆ ತುತ್ತಾಗುತ್ತಿದ್ದಾರೆ, ಅದರ ಸೈನ್ಸ್ ಏನಿದೆ ಅಂದರೆ ಇದರಿಂದ ಕೀಲುಬೇನೆ ಹಾಗು ಜ್ವರ ಬರುತ್ತದೆ, ಇದು ಒಂದೊಂದು ಊರಿನಲ್ಲಿ ಸುಮಾರು 100 ರಿಂದ 200 ಜನಕ್ಕೆ ಬಹಳ ವೇಗವಾಗಿ ವೈಲ್ಡ್ ತರಹ ಈ ರೋಗ ಹಬ್ಬುತ್ತಿದೆ. ಇದರ ಬಗ್ಗೆ ಆರೋಗ್ಯ ಸಚಿವರು ಅಲ್ಲಿರುವ ಜಿಲ್ಲಾಧಿಕಾರಿಗಳು ಹಾಗು ಅಲ್ಲಿರುವ ಜಿಲ್ಲಾ ಆರೋಗ್ಯಾಧಿಕಾರಿಗಳನ್ನು ಕರೆಸಿ ಕೇಳಿ. ಇವತ್ತು ಚಿಕನ್ ಗುನ್ಯಾ ಮತ್ತು ಲೆಪ್ಟೋಸ್‌ಪೈರಾಸಿಸ್ ಎಂದು ಕನ್‌ಫ್ಯೂಷನ್ ಇತ್ತು, ಅದು ಇಲಿ ಜ್ವರವಲ್ಲ, ಅದನ್ನೇ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ, ಅದು ಚಿಕನ್ ಗುನ್ಯಾ ಫೀವರ್ ಎನ್ನತಕ್ಕದ್ದು, ಅದೇನು ಫೇಟಲ್ ಡಿಸೀಸ್ ಅಲ್ಲ, ಆದರೆ ಅದು ಖಂಡಿತವಾಗಿ ವೈರಲ್ ಫೀವರ್. ಅದು 5–6 ದಿನ ಇರುತ್ತದೆ, ಅದರಲ್ಲಿ ಕೀಲು ಬೇನೆ ಬರುತ್ತದೆ, ಏಕೆಂದರೆ ಅದು ವೈಲ್ಡ್ ಫೈರ್ ತರಹ ಹಬ್ಬುತ್ತದೆ. ಇದು ಮಸ್ಕಿಟೋನಿಂದ ಹಬ್ಬುವಂತಹ ಒಂದು ರೋಗ, ಮಾನ್ಯ ಅಧ್ಯಕ್ಷರೇ, ಈಗ ನೀವು ಈ ರೋಗವನ್ನು ಕಂಟ್ರೋಲ್ ಮಾಡಿಲ್ಲವೆಂದರೆ ಇನ್ನೂ ಒಂದು ತಿಂಗಳಲ್ಲಿ ಸುಮಾರು 25% ಪಾಪ್ಯುಲೇಷನ್‌ಗೆ ಹಬ್ಬತಕ್ಕಂಥ ಸಾಧ್ಯತೆ ಇದೆ. ಇದರ ಬಗ್ಗೆ ಮಾನ್ಯ ಆರೋಗ್ಯ ಸಚಿವರು ವರದಿಯನ್ನು ತರಿಸಿಕೊಂಡು ಕೇಳಬಹುದು. ಇದನ್ನು ಕಂಟ್ರೋಲ್ ಮಾಡಬೇಕಿದ್ದರೆ ತಕ್ಷಣ ಮಸ್ಕಿಟೋವನ್ನು ಕಂಟ್ರೋಲ್ ಮಾಡುವಂತಹ ಎಲ್ಲಾ ಪ್ರಿಕಾಷನ್ ಅನ್ನು ನೀವು ತೆಗೆದುಕೊಳ್ಳಬೇಕಾಗುತ್ತದೆ. ಒಂದು ಆಸ್ಪತ್ರೆಯಲ್ಲೂ ಸಹ ಇವತ್ತು ಫಾಗಿಂಗ್ ಮಿಷಿನ್ಸ್ ಇಲ್ಲ, ಒಂದು ಆಸ್ಪತ್ರೆಯಲ್ಲೂ ಮಸ್ಕಿಟೋ ಕಂಟ್ರೋಲ್ ಪ್ರೋಗ್ರಾಮ್ ಮಾಡುತ್ತಿಲ್ಲ, ಮೊನ್ನೆ ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಒಂದು ಮೀಟಿಂಗ್ ಮಾಡಿದರು. ಆದರೆ ನಿಮ್ಮ ಜಿಲ್ಲೆಯಲ್ಲಿ ಮಸ್ಕಿಟೋ ಕಂಟ್ರೋಲ್ ಮಾಡುತ್ತಿಲ್ಲ, ಅದಕ್ಕೆ ಈಗ ಆರೋಗ್ಯ ಸಚಿವರು ಏನು ಹೇಳುತ್ತಾರೆ ಹೇಳಲಿ? ಏಕೆಂದರೆ, ಮಾನ್ಯ ಸಚಿವರು ಇದು ಘಡ್ ಪಾಯಿಸನ್ ಎಂದು ಹೇಳಿದರು. ಮಾನ್ಯ ಆರೋಗ್ಯ ಸಚಿವರಿಗೆ ಚಿಕನ್ ಗುನ್ಯಾ ಬಗ್ಗೆ ಏನು ಗೊತ್ತಿದೆಯೆಂದು ಹೇಳಲಿ. ಇವತ್ತು ಸುರ್‌ಪುರ, ಯಾದಗಿರ್, ಸಾತ್ವರ್, ಸೇಡಂ, ಬಿಜಾಪುರನಲ್ಲಿ ಎಷ್ಟು ಜನ ಈ ರೋಗಕ್ಕೆ ತುತ್ತಾಗುತ್ತಿದ್ದಾರೆ, ಜನ ಇವತ್ತು ಊರುಗಳಿಗೆ ಹೋದರೆ ನಮಗೆ ಮುತ್ತಿಗೆ ಹಾಕಿ ಇವತ್ತು "ಏನು ಮಾಡುತ್ತಿದ್ದೀರಿ, ಜನ ಸಾಯುತ್ತಿದ್ದಾರೆ" ಎಂದು ಕೇಳುತ್ತಾರೆ, ಆದರೆ ಜನ ಸತ್ತಿಲ್ಲ. ಜನ ಇದರಿಂದ ಭಯಬೀತರಾಗಿದ್ದಾರೆ, ಅದರಿಂದ ಇದರ ಬಗ್ಗೆ ಕ್ರಮ ಕೈಗೊಳ್ಳುವುದು ಅವಶ್ಯಕತೆ ಇದೆ.

ಈಗ ಸಚಿವರು ಏನು ಕ್ಲಾರಿಫಿಕೇಷನ್ ಕೊಡುತ್ತಾರೆ? ಈ ಚಿಕನ್ ಗುನ್ಯಾ ಫೀವರ್ ಕೋಳಿ ಜ್ವರ ಅಲ್ಲ, ಅದು ವೈರಲ್ ಫೀವರ್, ಅದರ ಬಗ್ಗೆ ಆರೋಗ್ಯ ಸಚಿವರು ಮಾಹಿತಿಯನ್ನು ಸಂಗ್ರಹಿಸಿದ್ದಾರೆಯೇ? ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ, ಮಸ್ಕಿಟೋ ಕಂಟ್ರೋಲ್ ಮಾಡಲಿಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆ. ... ಇದರ ಬಗ್ಗೆ ಮಂತ್ರಿಗಳು ಕ್ಲಾರಿಫಿಕೇಷನ್ ಕೊಡಬೇಕು ಅಧ್ಯಕ್ಷರೇ.

ಚೇರ್ಮನ್: ಈಗ ಸೋಮವಾರ, ಮಂಗಳವಾರ, ಬುಧವಾರ ಮತ್ತೆ ಸದನ ಸೇರುವುದರಿಂದ ಅದರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿಇ ಸದನಕ್ಕೆ ಅದರ ಬಗ್ಗೆ ವರದಿಯನ್ನು ಕೊಡಿ, ಆಯಿತು, ಶ್ರೀಮತಿ ಶಕುಂತಲಾ ಶೆಟ್ಟಿಯವರು ಮಾತನಾಡಲಿ.

ಶ್ರೀ ಶರಣಗೌಡ ಪಾಟೀಲ್: ಅಧ್ಯಕ್ಷರೆ, ಈಗ ಇದರ ಬಗ್ಗೆ ಮಾಹಿತಿ ಇಲ್ಲವೆಂದು ಹೇಳುವಿರಾ, you have to put effort on this ನೀವು ಈ ರೀತಿ ಮಾಹಿತಿ ಕೊಡದ ಕ್ಲೋಸ್ ಮಾಡಲಿಕ್ಕಾಗುವುದಿಲ್ಲ. This is a matter of important public issue. ಇವತ್ತು ಆರೋಗ್ಯದ ಕಾರ್ಯದರ್ಶಿಯವರನ್ನು ಈ ಬಗ್ಗೆ ಕೇಳಿ, ಇದರ ಬಗ್ಗೆ ಮಂತ್ರಿಗಳಿಗೆ ಅರಿವೇ ಇಲ್ಲದಿದ್ದರೆ ಕ್ರಮಕೈಗೊಳ್ಳಲು ಆಗುತ್ತದೆ? this is very bad.

ಚೇರ್ಮನ್: ಹೆಲ್ತ್ ಮಿನಿಸ್ಟರ್ ಮಾತನಾಡುತ್ತಿದ್ದಾರೆ, ಕೇಳಿ.

ಶ್ರೀ ಆರ್.ಅಶೋಕ್(ಮಾನ್ಯ ಆರೋಗ್ಯ ಸಚಿವರು): ಅಧ್ಯಕ್ಷರೆ, ಈಗ ರಾಜ್ಯದ ಐದು ಜಿಲ್ಲೆಗಳಲ್ಲಿ ಈ ಚಿಕನ್ ಗುನ್ಯಾ ರೋಗ ಬಂದಿರುವ ಬಗ್ಗೆ ನಮ್ಮ ಗಮನಕ್ಕೆ ಬಂದಿದೆ, ನಾನೇ ಸ್ವತಃ ಪಾವಗಡಕ್ಕೆ ಹೋಗಿ ಅಲ್ಲಿ ಸಭೆ ಮಾಡಿ ಅಲ್ಲಿ ಏನೇನು ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ನಾಲ್ಕು ಗಂಟೆಗಳ ಕಾಲ ಅಲ್ಲಿನ ನಮ್ಮ ಅಧಿಕಾರಿಗಳ ಜೊತೆ ಕುಳಿತು ಅಲ್ಲಿ ಬೇಕಾಗಿರುವ ವೈದ್ಯರು, ಔಷಧಿಗಳು ಇವುಗಳ ಬಗ್ಗೆ ಚರ್ಚೆ ಮಾಡಿದ್ದೇನೆ. ಬೇರೆ ಬೇರೆ ಕಡೆಯಿಂದ ಫಾಗಿಂಗ್ ಮಿಷನ್ಸ್ ಬೇಕಾಗಿದೆ. ಇವೆಲ್ಲಾ ವ್ಯವಸ್ಥೆಯನ್ನು ಮಾಡಿ ನಾನು ಕ್ರಮ ತೆಗೆದುಕೊಂಡಿದ್ದೇನೆ. ಮಾನ್ಯ ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಸಹ ನನ್ನೊಂದಿಗೆ ಆ ಬಗ್ಗೆ ಮಾತನಾಡಿದ್ದಾರೆ. ನಾನು ಅಲ್ಲಿಗೆ ಹೋಗಲಿಕ್ಕೆ ಕಾರ್ಯಕ್ರಮವೆಲ್ಲಾ ಫಿಕ್ಸ್ ಆಗಿತ್ತು, ಆದರೆ ಮೊನ್ನೆ ಹೋಳಿ ಹಬ್ಬವಿದ್ದ ಕಾರಣ ಅಲ್ಲಿನ ಎಂ.ಎಲ್.ಎ. ಹಾಗೂ ವಿಧಾನಪರಿಷತ್ತಿನ ಸದಸ್ಯರು ತಾವು ಅಲ್ಲಿಗೆ ಬರುವುದು ಸರಿಯಿಲ್ಲವೆಂದು ಹೇಳಿದ್ದರಿಂದ ನಾನು ಹೋಗಿಲ್ಲ, ಈ ತಿಂಗಳ 31ನೇ ತಾರೀಕು ನಾನು ಅಲ್ಲಿಗೆ ಭೇಟಿ ನೀಡುವ ಕಾರ್ಯಕ್ರಮವಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ, ಹಾಗಾಗಿ 31ರಂದು ಗುಲ್ಬರ್ಗ, ಬೀದರ್ ಜಿಲ್ಲೆಗೆ ನಾನು ಬೇಟಿ ಮಾಡಿ ಅಲ್ಲಿ ಕುಳಿತು ಜಿಲ್ಲಾಧಿಕಾರಿಗಳ ನೇತ್ರತ್ವದಲ್ಲಿ ಒಂದು ಸಮಿತಿ ಮಾಡಿ ಸಂಪೂರ್ಣವಾಗಿ ಆ ರೋಗವನ್ನು ಕಂಟ್ರೋಲ್ ಮಾಡಲಿಕ್ಕೆ ಅದಕ್ಕೆ ಬೇಕಾದ ಮೆಡಿಸಿನ್, ಡಾಕ್ಟರ್ ಇತ್ಯಾದಿ ಏನೇನು ವ್ಯವಸ್ಥೆಯನ್ನು ಮಾಡಬೇಕೊ ಆ ಎಲ್ಲಾ ವ್ಯವಸ್ಥೆಯನ್ನು ಸರ್ಕಾರದ ವತಿಯಿಂದ ನಾನು ಮಾಡುತ್ತೇನೆ.

ಶ್ರೀ ಶರಣ ಗೌಡ ಪಾಟೀಲ್: ನೀವು ಇವತ್ತೇ ಡೈರೆಕ್ಷನ್ ಕೊಡಿ, ಏಕೆ 31 ರವರೆಗೆ ಕಾಯುತ್ತಿದ್ದೀರಿ, you give directions today for procurement of foging machines and taking appropriate action, ದಿನಾಂಕ 31 ರವರೆಗೆ ಅಲ್ಲಿನ ರೋಗಿಗಳು ಸಾಯಬೇಕೆ?

ಚೇರ್ಮನ್: ಶ್ರೀಮತಿ ಶಕುಂತಲಾ ಶೆಟ್ಟಿಯವರು ಮಾತನಾಡಿ.